This song is sung during the Shravana Masa every Saturday. It is scanned and uploaded by Meera Subbarao for the blog http:// http://meerasubbarao.wordpress.com/. You can find several other songs and links on the blog as well.

# ಶ್ರೀ ಶ್ರಾವಣ ಸಂಪತ್ತು ಶನಿವಾರದ ಹಾಡು

ಗಜವದನ ಪಾದಂಬುಜಗಳಿಗೆರಗುವೆ। ಅಜನರಸಿಗೆ ನಮಸ್ಕರಿಸಿ। ತ್ರಿಜಗವಂದಿತ ಲಕ್ಷ್ಮೀನಾರಾಯಣಸ್ವಾಮಿ । ನಿಜಪತ್ನಿ ಕಥೆಯ ವರ್ಣಿಸುವೆ। ಅರಸನಸೇವೆ ಮಾಡುತೊಂದು ಪಟ್ಟಣದೊಳು। ಇರುತಿರ್ದ ಸೋಮೇಶ ಭಟ್ಟ। ಹರುಷದಿಂದಲಿ ಸೊಸೆಯರು ಗಂಡುಮಕ್ಕಳು ಭರರಿತರಾದರು ಸುಖದಿಂದ ॥ 2 ॥ಆ ಮಹಾಕ್ಷೀರಸಾಗರದಲ್ಲಿ ಜನಿಸಿದ। ಶ್ರೀ ಮಹಾಲಕ್ಷ್ಮೀದೇವಿಯನು। ನೇಮದಿಂದಿಟ್ಟು ನಿಷ್ಠೇಲಿ ಸೋಮೇಶನು। ತಾ ಮಹಾ ಸಂಭ್ರಮದಿಂದ ॥ 3 ॥ಚಾರು ಪರಿಮಳ ಅರಿಸಿನ ಗಂಧ ಕುಂಕುಮ। ಕೇದಿಗೆ ಕುಸುಮ ಮಲ್ಲಿಗೆಯ। ಮಾಧವನರಸಿ ಮಹಾಲಕ್ಷ್ಮಿಗರ್ಪಿಸಿ । ಮಂಗಳಾರತಿಯ ಬೆಳಗಿದರು ॥ 4 ॥ ಎಣ್ಣೋರಿಗೆ ಭಕ್ಷ್ಯ ಸಣ್ಣ ಶಾವಿಗೆ ಪರಮಾನ್ನ । ಶಾಲ್ಯನ್ನಶಾಕುಗಳನು । ಚೆನ್ನವಾಗಿದ್ದ ತಾಂಬೂಲವನರ್ಪಿಸಿ। ಆದರುದಿಂದುಂಡಿರುತಿಹರು ಹರುಷದಿ ॥5॥ ಸುಂದರಗೌರಿ ಶುಕ್ರವಾರ ಪೂಜಿಸಿಯಾ। ನಂದದಿ ಶನಿವಾರದಲಿ । ಕುಂದಮಂದಾರ ಮಲ್ಲಿಗೆ ಗಂಧ ಕುಂಕುಮ ಚೆಂದದಿಂದಾರತಿ ಬೆಳಗಿದರು ॥6 ॥ ಹಿಟ್ಟಿನ ಕಡುಬು ಹಿಂಡಿ ಪಲ್ಯವನೆ ಮಾಡಿ। ಅಚ್ಚೆಳ್ಳು ಗಾಣದೆಣ್ಣೆಯನು। ನುಚ್ಚು ಮಜ್ಜಿಗೆ ತುಳಸಿ ತಿಳಿಯ ಕಟ್ಟಂಬಲಿ। ಇಟ್ಟರು ನೈವೇದ್ಯವನು ॥ 7 ॥ ಭೋಜನಕ್ಕೆನುತ ಕುಳ್ಳಿರುವೋ ಕಾಲಕೆ ಬಂದು। ರಾಜನ ಸತಿಯೂ ಕುಳ್ಳಿರಲು ಸೋಜಿಗವೆ ನಿಮ್ಮ ಗೌರಿಯ ಸಂಪತ್ತು ಮೂಜಗದೊಳು ಕಾಣೆನೆಂದು ॥ 8 ॥ ಬೇಕಾದರೊಂದು ಬೇಡಲರಸಿ ಸತಿ। ಸಾಕು ದರಿದ್ರದಂಬಲಿಯು। ಹಾಕಿದರ್ ಹರಡಿ ಕಂಕಣದೊಳು ಸಿಕ್ಕೀತು। ನಾಕೈಯ್ಯ ಇಡಲಾರೆನೆಂದು ॥ 9 ॥

ಥಟ್ಟಾನೆದ್ದಾಕಿಕೊಂಡಷ್ಟು ಪದಾರ್ಥವ ಸಂತುಷ್ಟರಾಗುಂಡವರು। ಕಟ್ಟಿದ್ದ ತೂಗುಮಣೆಯಲಿ ಕಾಲುಗಳಿ। ಬಿಟ್ಟು ಕೂತಳೆ ರಾಜನರಸಿ ॥ 10 ॥ಒಂದೊಂದು ಅಡಿಗೆ ನಿಂದ್ಯವು ಮಾಡಿ । ನಗುತಿರೆ ಕುಂದಿತು ಸಂಪತ್ತು । ಬಂದಿತು ಪರರಾಜರಿಂದ ಮುತ್ತಿಗೆ ದಾರಿ। ಬಂಧನ ಮಾಡಬೇಕೆನುತ ॥ 11 ॥ ಅರಿತು ಓಡುತಲಿರೆ ತ್ವರಿತ ಬಂದರಿತನ ಅನುಸರಿಸ್ಯಾಗ ನಡೆದಳು। ದಿನತುಂಬಿದಂತೆ ಗರ್ಭಿಣಿಗಾಗ ಬಂದಾವು। ಕ್ಷಣಕೊಮ್ಮೆ ಟೊಂಕಬೇನೆಗಳು ॥ 12 ॥ ಪುತ್ತಳಿಗೊಂಬೆಯಂದದಿ ಜೋಡುಮಕ್ಕಳು ಕಿತ್ತಳೆವನದಲಲಿ ಜನಿಸೆ। ಹೊಚ್ಚಿಟ್ಟಳಾ ಬಾಳೆಯಲೆ ಹಾಸಿ ಮಲಗಿಸಿ । ಥಟ್ಟನೆ ದಾಟಿ ನಡೆದಳು ॥ 13 ॥ ಬೇಕಾದ ಫಲಗಳನೇಕ ಪುಷ್ಪಂಗಳ ಜೋಕೆ ಮಾಡುತಾ ವನದೊಳು। ಕೋಗಿಲೆಗಿಳಿ ನವಿಲ್ ಹಿಂಡುಗಳನ ಕಂಡು। ಹಾಕುತಿದ್ದವು ಕಾಲಗಳನು ॥ 14 ॥ನಸುಕಿನೊಳಗೆಬಂದಾ ಸೋಮೇಶಭಟ್ಟನುಉ ಹಸುಮಕ್ಕಳನೆ ಕಾಣುತಲಿ। ಮುಸುಕಿಟ್ಟುತಂದು ಮುದ್ದಿಸುವ ತನ್ನಯ ಸತಿ ವಶಮಾಡಿಕೊಟ್ಟಕೈಯ್ಯೊಳಗೆ ॥ 15 ॥ ಹುಟ್ಟಲಿಲ್ಲ ಹೆಣ್ಣುಮಕ್ಕಳ । ನಮಗಿನ್ನ । ಕೊಟ್ಟನು ದೇವನೆಂದೆನುತ ಅರ್ತಿಯಿಂದಲ್ಲಿ ಮೂಬಟ್ಟಾಲಿರಲು ಮಾಡಿ । ತೊಟ್ಟಿಲೊಳಿಟ್ಟು ತೂಗಿದರು ॥ 16 ॥ ನಾಮಕರಣ ಮಾಡುತ ಹೆಸರಿಟ್ಟರುಉ ಸಾಯಕ್ಕ ಧೇಯಕ್ಕನೆಂದೆನುತ ಪ್ರಾಯಕ್ಕೆ ಬಂದ ಮಕ್ಕಳಾ ನೋಡಿ ಹುಡುಕಿದ। ಸೋಮಾರ್ಕರಂಥವರರನು ॥ 17 ॥ ಅರಸನ ಕರತಂದು ಅಕ್ಕನ ಕೊಟ್ಟರಾಗಲೇಉ ಕರೆಸಿ. ಪ್ರಧಾನಿ ತಂಗಿಯನು ಹರುಷದಿಂದಲಿ ಧಾರೆಯೆರೆದು ಹೆಮ್ಮಕ್ಕಳ। ಕಳುಹಿದನವರ ಮಂದಿರಕೆ ॥ 18 ॥ ಅಕ್ಕರೆಯಿಂದ ಹೇಳಿದಳು ಸೋಮೇಶಮ್ಮ । ಮಕ್ಕಳ ಬುದ್ಧಿಯನು। ಶುಕ್ರವಾರದ ಗೌರಿ ಮರೆಯದೇ ಮಾಡೆ ಶ್ರೀ। ಲಕ್ಷ್ಮಿ ಒಲಿವಳೆಂದೆನುತ ॥ 19 ॥ ಸಾಯಕ್ಕ ಮಾಡಲಾ ಸಂತಾನ ಸಂಪತ್ತಿಗೆ। ಸಹಾಯವಾದಳು ಮಹಾಲಕ್ಷ್ಮಿ। ಧೇಯಕ್ಕ ಮರೆತು ದೇಹಕ್ಕೆ ಗ್ರಾಸವಿಲ್ಲದೆ। ರಾಯನ ಸೆರೆಹಾಕಿದರು ॥ 20 ॥ ಪೊಡವಿಪಾಲಕ ಬಂಧ್ಹಿಡಿದುಕೊಂಡೊಯ್ಯಲು ಉಡುಗೆ ತೊಡುಗೆ ವಸ್ತ್ರಾಭರಣ। ಅಡಗಿತು ಸಕಲ ಸಂಪತ್ತು ಧೇಯಕ್ಕಗೆ ದೃಢವಾಯಿತಾಗ ದಾರಿದ್ರ್ಯ ॥ 21 ॥ ಮಾತನಾಡಿದರು ಮಕ್ಕಳು ತಾಯನೊಡಗೂಡಿ। ತೆರವಾಯಿತೇ ಬದುಕು। ಮಾತಾಪಿತೃ ಒಡಹುಟ್ಟಿದವರು ನಿನಗೆ। ಮಾತನಾಡಿಸುವವರು ಯಾರಿಲ್ಲ ॥ 22 ॥ ದೂರದಲ್ಲಿರುವೋನ್ನ

ತಾಯಿತಂದೆಯವರು । ಸಾರ್ಯಾದಲ್ಲಿರುವೊಳೊಬ್ಬ ತಂಗಿ । ಸೂರಿಹೋಯಿತು ದೊರೆತನ ಭಾಗ್ಯ ಬಡ। ಪ್ರಧಾನಿ ಹೇಗಿರುವನೋ ನಾನರಿಯೆ ॥ 23 ॥ ಕಂಡುಬರುವೆನೆಂದು ಚಿಂದಿಮೆಯ್ಗೆ ಸುತ್ತಿ ತುಂಡು ಕೋರಿಯ ಹೊದ್ದುಕೊಂಡು। ಮಂಡೆಗ್ಹಚ್ಚಿದ ತಾಳಾಪ್ರಣತಿಯೆಣ್ಣೆ ಹೊಳೆ। ದಂಡೇಲಿ ಬಂದು ಕುಳಿತನು ॥ 24 ॥ ಪೋರ ನೀನಾರೆಂದು ವಿಚಾರವ ಮಾಡಲು । ನೀರಿಗೆ ಬಂದ ನಾರಿಯರು। ದೂರದಿ ಬಂದೆ ಧೇಯಕ್ಕನ ಓರಿಯ। ಕುಮಾರಕನೆಂದ್ಹೇಳಿ ಕಳುಹಿಸಿದನು ॥ 25 ॥ ಬಂದ್ಹೇಳಿದವನ ಅಂದಚೆಂದಗಳೆಲ್ಲ । ಕರೆತನ್ನಿ ಹಿತ್ತಲಲ ಬಾಗಿಲಿನಿಂದ ಬಂದ್ಹೇಳಿಕೊಂಡ ದಾರಿದ್ರ್ಯ ಕಷ್ಟಗಳೆಲ್ಲ ಉಂಡುಟ್ಟು ಸುಖದಿ ತಾನಿದ್ದ ॥ 26 ॥ ಆಲಲಯಕ್ಕೋಗೆ ಬರುವನೆಂದಪ್ಪಣೆ ಕೇಳು ಕಾಲಹರಣ ಮಾಡದಂತೆ॥ ಕೋಲಿನೊಳಗೆ ಹಣತುಂಬ ಕಯ್ಯಲ್ಲಿಟ್ಟು। ಆಲಲಸ್ಯವಿಲ್ಲದೆ ಕಳುಹಿಸಿದಳು ॥ 27 ॥ಬಾಲಕ ನಿನಗಿಂತ ಕೋಲೇಕೆನುತಲಿ ಗೋ ಪಾಲಕ ಸೆಳೆದು ಕೊಂಡೊಯ್ಯೆ। ನೂತನದವಗಿರಿಂಥೋಸ್ತು ಯಾಕೆಂದು ಆಲೋಚಿಸುತ ತಾ ಬಂದ ॥ 28 ॥

ಮಿಡುಕುತ್ತ ಬಂದು ಮಾತೆಗೆರಗಿದನಾಗ। ಒಡನುಡಿ ವಾರ್ತೆ ಕೇಳುತಲಿ। ಕೊಡುವಷ್ಟು ಕೊಟ್ಟಾರೆನಗೆ ದಕ್ಕದೆಂದೆನುತಲಿ। ನಡೆದನು ಮತ್ತೊಬ್ಬತನಯ ॥ 29 ॥ ತಾಳಪ್ರಣತಿ ಯಣ್ಣೆ ತಲೆಗೆಪೊಸಿಮೊಳ ಕೋರಿಯ ಹೊದ್ದುಕೊಂಡು ಬಳಕುತ ಬಂದ ಬಾವಿಯ ಮೇಲೆ ಕುಳಿತ್ಹೇಳಿ ಕಳುಹಿಸಿದ। ವನರ ಮಂದಿರಕ್ಕೆ ॥ 30 ॥ ಗೊತ್ತಿಲಿ ಕರೆತಂದು ಹಿತ್ತಲ ಬಾಗಿಲಲ್ಲೇ ವಾರ್ತೆಗಳನೆ ಕೇಳುತ। ಅತ್ಯಂತ ಕರುಣದಿಂದಲೆ ಭಕ್ಷ್ಯಪಾಯಸ । ಮೃಷ್ಟಾನ್ನವನುಣಿಸಿದರು ॥ 31 ॥ ನಿತ್ಯುಪವಾಸ ಮಾಡುವರೆನ್ನ ಮನೆಯಲ್ಲಿ । ಅಪ್ಪಣೆಗಳ ನೀಡೆಂದೆನುತ ಬುತ್ತಿಯೊಳಗೆ ಹಣಕಟ್ಟಿ ಕಳುಹಲು ಕಾಗೆ। ಕಚ್ಚಿಕೊಂಡೊಯ್ಯಲಾಕ್ಷಣದಿ ॥ 32 ॥ ಏನು ಹೇಳಲಿ ನಾ ಹೋದ ಕಾರ್ಯಗಳಿಗಿಂತ। ಹೀನವಾಯಿತು । ಹೀಗೆಂದೆನುತ। ನಾ ಹೋಗಿಬರುವೆನೆಂದೆನುತ। ಮತ್ತೊಬ್ಬ ಕುಮಾರ ತೆರಳಿದನು ॥ 33 ॥ ಹರಕು ಕೋರಿಯನುಟ್ಟು ಒಡಕುತಂಬಿಗೆ ಪಿಡಿದು ಕೆರೆಕುಬುತ್ತಿಯನೆ ಕಟ್ಟಿಕೊಂಡು। ಗುರುತ್ಹೇಳಿ ಕಳುಹೆ ಹಿತ್ತಲ ಬಾಗಿಲಿನಿಂದ। ಕರೆತಂದಾಗ ಮಂದಿರಕೆ ॥ 34 ॥ ಎರಡುದಿನವಿಟ್ಟುಕೊಂಡುಪಚರಿಸುತ್ತ। ಬುರುಡೆಯೊಳಗೆ ಹಣವನ್ನು । ಕಡುಬೇಗದಿಂದ ಕಯ್ಯಲಿ ತಂದುಕೊಡಲಾಗ। ನಡೆದ ತಾನಡಿದ ಮಾರ್ಗದಲಿ ॥ 35 ॥ ಸೆಳೆದುನಾರಿಗೆ ಬಿಸಿಲೇರಿ ಭಾವಿಯ ಕಂಡು। ಇಳಿದ ಪಾವಟಿಗೆಯಲ್ಲಿಟ್ಟು। ಬುಡು ಬುಡು ಉರುಳಿ ಮಡುವ ಸೇರಲದಕಂಡು ಮಿಡುಕುತ್ತ ಬಂದ ಮಂದಿರಕೆ ॥ 36 ॥ ಗತಿಹೀನರೊಳಗೆ ನಮ್ಮಂಥ ನಿರ್ಭಾಗ್ಯರು । ಪೃಥ್ವಿಯೊಳಗೆ ಕಾಣೆನೆಂದೆನುತ । ಅತಿ ಬಾಯಿಬಿಡುವ ಮಾತೆಯ ಕಂಡು ಮತ್ತೊಬ್ಬ ।ಸುತನಾಗ ತೆರಳಿ ನಡೆದನು ॥ 37 ॥ ಸೊಕ್ಕಿದ ಮೈಗೆ ಛಿದ್ರ ಬಟ್ಟೆಯ ಸುತ್ತಿ। ಕಕ್ಕುತ ಶೀರು ಹೇನುಗಳು। ಚಿಕ್ಕಮ್ಮ ವೇಳಿ ಕಳುಹೆ ಕರೆತಂದು । ಹಿತ್ತಲ ಬಾಗಿಲಿನಿಂದಾಗ ॥ 38 ॥ ಏಳೆಂಟು ದಿನದಲ್ಲಿ ಬಹಳುಪಚರಿಸುತ್ತ। ಬಾಳುವಾಕ್ರಮ ಕೇಳುತಲಿ । ಜಾಳಿಗಿಹೊನ್ನು ಚಂಮಾಳಿಗೆಯಲಿ ತುಂಬಿ। ಕಾಲಮೆಟ್ಟಿಸಿ ಕಳುಹಿಸಿದಳು ॥ 39 ॥ ಅದು ಮೆಟ್ಟಿ ಬರುತಿರೆ ಒದಗಿ ಬಂದಾಂಶದಿ। ಹದಲು ಕಾಣದೆ ಸಿಗಿಬಿದ್ದು। ಎದೆಬಾಯಿ ಬಿಡುತೆತ್ತ ಹುಡುಕಿದರಿಲ್ಲೆಂದು। ಇದರಿಗೆ ಬಂದು ತಾ ನಿಂತ ॥ 40 ॥

ನಾಲ್ಕು ಮಂದಿ ಸುದ್ದಿ ನಾನಾಪರಿ ಕೇಳಿ । ವ್ಯಾಕುಲವಾಯಿತು ಮನಕೆ । ನಾ ಕಂಡು ಬರುವೆನೆಂಬೆನುತ ಧೇಯಕ್ಕ। ಆ ಕಾಲದಲ್ಲಿ ತೆರಳಿದಳು ॥ 41 ॥ ಉಟ್ಟಳು ಮಾರು ಸೀರೆಯನ್ನು ತೋಳಿನಲ್ಲಿ। ತೊಟ್ಟಳು ಚಿಂದಿಕುಪ್ಪುಸವ। ಕಟ್ಟಿದ ಜಡೆಗೆಣ್ಣೆ ಹಚ್ಚಿ ಗಂಟನೆ ಹಾಕಿ । ಬೊಟ್ಟು ಕುಂಕುಮವ ತೀಡಿದಳು ॥ 42 ॥

ಒಂದೊಂದು ಕರಿಯ ಗಾಜಿನ ಬಳೆ ಕೈಯ್ಯಲಿ। ಕಂದಿ ಕುಂದಿದ ಕೂಸನೆತ್ತಿ ಬಂದಳು ನಿಮ್ಮಧೇಯಕ್ಕನೆಂದೆನುತಲಿ ತಂಗಿಗೇ ವಾರ್ತೆಯ ಕಳುಹಿದಳು ॥ 43 ॥ ಅಕ್ಕನಾ ಕರೆತಂದರಾ ಹಿತ್ತಲಿಂದಲಿಲು ಶುಕ್ರವಾರದ ಶುಭದಿನದಿ ಮಕ್ಕಳು। ಸೊಸೆಯರೊಡಗೂಡಿ ಬಂದು ಧೇ। ಯಕ್ಕನ ಚರಣಕ್ಕೆರಗಿದರು ॥ 44 ॥

ಅಂದಗಲಿದ ಅಕ್ಕತಂಗಿಯರಿಬ್ಬರು। ಇಂದಿಗೆ ಕಲೆತೆವೆಂದೆನುತ। ಮಿಂದು ಮಡಿಯನ್ನುಟ್ಟು ಬಂದೆಲ್ಲಾ ಪರಿವಾರ ಎಂದು ಭೋಜನಕೆ ಕುಳಿತರು ॥ 45 ॥ ಹೋಳಿಗೆ ಹೊಸಬೆಣ್ಣೆ ಕಾಸಿದಾತುಪ್ಪವು ಕ್ಷೀರಶಾವಿಗೆಯ ಮೃಷ್ಟಾನ್ನ। ಬೇಗದಿಂದುಂಡು ಹಾಕುತಲೆ ತಾಂಬೂಲ ತೂಗುಮಂಚದಿ ಮಲಗಿದರು ॥ 46 ॥ ಬೆಳಗಾಗಲೆದ್ದು ಹೇಳಿದರೆ ಆ ಸೊಸೆಯರ ಕರೆದು ಸಾಯಕ್ಕ ಕೆಲಸವ ಬಿಳಿಜೋಳ ಕುಟ್ಟಿ ಬೀಸಿರೆ ನೀವು ಇಂದಿನಲು ಅಡುಗೆಯ ಕ್ರಮ ಹೇಳುವೆನು ॥ 47 ॥ ಹುಳಿನುಚ್ಚು ಮಾಡಿದರೆ ತಿಳಿಯ ಕಟ್ಟಂಬಲಿ ಎಳೆಸೊಪ್ಪು ಹಿಂಡಿ ಪಲ್ಯವನು। ತರಿಸುವೆ ಗಾಣದ ಎಳ್ಳಿನ ತಿಳಿ ಎಣ್ಣೆ। ಹಿಂಟಿನ ಕಡುಬ ನೀವ್ ಎನುತ ॥ 48 ॥ ಆದ ಕೇಳಿ ಧೇಯಕ್ಕ ಹೃದಯ ತಲ್ಲಣಿಸುತ್ತ। ಎದೆಯೊಳಗಲಗನೆಟ್ಟಂತೆ। ಉರಿಯ ಒಲೆಗೆ ಎಣ್ಣೆ ಸುರಿವಿದಂತಾಯಿತು ಸಿರಿಯ ಸಂಪತ್ತಿನಿಂದಾಕೆ। ಗರಗಸದಿಂದಲಿ ಕೊರೆದುಪ್ಪು ಸಾಸಿವೆ ಅರೆದ್ದಚ್ಚಿದಂತೆ ಮಾತುಗಳು ॥ 49 ॥ ಕೆಟ್ಟುಬಡವರು ಬರಬಾರದು ಜಗದೊಳು ಅಟ್ಟುಂಬೋಮನೆಯ ಬಾಗಿಲಿಗೆ। ಕಷ್ಟದಿ ಕಾಲಕಳೆಯಲಾರದಿದ್ದರೆ ಕಟ್ಟಡವಿ ಸೇರೋದೇ ಲೇಸು ॥ 50 ॥ ಪರರ ಮನೆಯಲಿ ಅಪಹಾಸ್ಯವಾಗುವುದಕ್ಕಿಂತ ವನವಾಸಗಳು ಲೇಸೆಂದೆನುತ ಮನದಾ ಸಂತಾಪಸೈರಿಸಲಾರದೆದ್ದಳು। ದನವನ್ನೇ ಕಟ್ಟೋ ಮಂದಿರಕೆ। ಎತ್ತಿನ ಗೋದಾನಿ ಒಳಗೆ ಕಂದಲದಂಟು ಸಪ್ಪೆಗಳನೆ ಹೊದ್ದುಕೊಂಡು ಕಚ್ಚುತಿರಲು ಚಿಕ್ಕಾಡು ಕ್ರಿಮಿಗಳೆಲ್ಲ। ಅತ್ತಿತ್ತಲುಗದೆ ಮಲಗಿದಳು ॥ 52 ॥ ಮಧ್ಯಾಹ್ನವಾಯಿತು ಅಡಿಗೆ ಧೇಯಕ್ಕನ ಸದ್ದು ಸುಳಿವು ಕಾಣಲಿಲ್ಲ। ನಿದ್ರೆಯಿಂದೆಲ್ಲೋ ಮಲಗಿದ್ದಳಾಕೆಯು। ಇದ್ದರಲ್ಲಿ ಕರೆತನ್ನಿ ॥ 53 ॥

ಬಲ್ಲಷ್ಟು ಮನೆ ಹುಡುಕಿದೆವು ಅತ್ತೆ ಬಾಯಾರ। ಸೊಲ್ಲು ಸುಳಿವು ಕಾಣಲಿಲ್ಲ। ಎಲ್ಲಿ ಹುಡುಕಿದರಿಲ್ಲವೆನುತ ಬಂದಾಗ। ಎಲ್ಲ ಸೊಸೆಯರು ಹೇಳಿದರು ॥ 54 ॥ ಒಳಗೆಲ್ಲ ಹುಡುಕಿ ಬಂದೇವು ಸಂದುಗೊಂದಿಲಿ ಆ । ಕಳು ಕಟ್ಟುವಂತ ಗೋದಾನಿಯಲೆ ಸೆಳೆದು ದಂಟುಗಳು ಹಾಕುತ್ತಿರುವ ಗೋದಾನಿಯಲಿ। ಸುಳಿವು ಕಂಡ್ಹಿಡಿದರಾಕ್ಷಣದಿ ॥ 55 ॥ ಸಿಕ್ಕಾರು ನಮ್ಮ ಅತ್ತೆಯರು ಎಂದೆಬ್ಬಿಸುತಲಿ । ಹಸ್ತವಿಡಿದು ಕರೆತಂದೇವ್ ಉಕ್ಕುವ ಉರಿಮೋರೆಯನ್ನು ನೋಡಿ ಮನದಾ। ಸಿಟ್ಟೇನೆನುತ ಕೇಳಿದರು ॥ 56 ॥

ಹೇಳುವುದೇನು ಕೇಳುವುದೇನು ನಿಮಗಿಂತ। ಎಳ್ಳುವಾದೆವೆ ನಾನೆಂದೆನುತ ಜೋಳದನ್ನವ ಕಾಣದೆ ನಾ ಬಂದೇನೆ ನಾಳೆ ಪೋಗುವೆ ನಮ್ಮ ಮನೆಗೆ ॥ 57 ॥ ಭಕ್ಷ್ಯಪಾಯಸಮಾಡಿ ನಿನ್ನಿನ ದಿವಸ ಈವತ್ತೇ ದುರ್ಭಿಕ್ಷದಡಿಗೆಯು। ಬಿಕ್ಷಕ್ಕೆ ಬಂದೇನೇ ನಿಮ್ಮ ಮನೆಗೆ ನಾನು। ಆ ಕ್ಷಣ ಜಲವ ತುಂಬಿದಳು ॥ 58 ॥ ಅಕ್ಕನ ವಚನವ ಕೇಳಿ ಆಲೋಚಿಸಿಲು ನಕ್ಕಳು ತನ್ನ ಮನದಲ್ಲಿ ಶುಕ್ರವಾರದ ಗೌರಿ ಮಾಡದೆ ನೀವಿಂಥ ದುಃಖಕ್ಕೆ ಗುರಿಯಾದರೆಂದು ॥ 59 ॥ ಬರುವ ಕಾಲದಲಿ ಕರೆದು ನಮ್ಮಮ್ಮನು। ಅರುಹಲಿಲ್ಲವೆ ಗೌರಿಯನು । ಸಿರಿಯಸಂಪತ್ತನ್ನೇ ಕೊಡುವಂಥ ಶನಿವಾರ। ಮರೆತು ಬಿಟ್ಟೆಯೇನೆ ಅಕ್ಕಯ್ಯ ॥ 60 ॥ ಲಕ್ಷ್ಮಿಮಿದೇವಿಯು ಆಲಸ್ಯಮಾಡಿದ್ದರಿಂದ ಈಕ್ಷಕ್ಕೆ ಬಂದು ತೊಲಗಿದಿರಿ ಈ ಕ್ಷಣದಲ್ಲಿ ನಮ್ಮ ಮನೆಯಲ್ಲಿ ಪೂಜಿಸೆ। ಸಾಕ್ಷಾತ್ ಶ್ರೀ ಗೌರಿಯನ್ನು ॥ 61 ॥

ಎರೆದು ಪೀತಾಂಬರ ಉಡಿಸಿ ತಂದಿಟ್ಟರೆ। ಪರಿಪರಿ ವಸ್ತ್ರಾಭರಣ। ವರಮಣೆಯ ಮೇಲೆ ಮಂಟಪದೊಳು ಚಟ್ಟಂಗಿ। ಬರೆದಿಟ್ಟರಾಗಪೀಠದಲ್ಲಿ ॥ 62 ॥ ಮುಂದೆ ಕಟ್ಟಿಸಿದರು ಮಕರ ತೋರಣಗಳು ದುಂದುಭಿ ಭೇರಿ ಬಡಿದವು। ಮಿಂದು ಮುತ್ತೈದೇರುಸಹಿತ ಬ್ರಾಹ್ಮಣರೆಲ್ಲ ಅಂದರೆ ವೇದೋಕ್ತ ಮಂತ್ರಗಳು ॥ 63 ॥ ಹಾಡಿದರಯ್ಯ ಪಲ್ಲಕ್ಕಿ ಅದರೊಳು ನಾಲ್ಕೆಂಟು ನಂದಾ ದೀವಿಗೆಯು। ಶ್ರೀಕಮಲದ ಮಧ್ಯದಲ್ಲಿ ಸ್ಥಾಪನೆ ಮಾಡಿ ಅನೇಕ ಭಕ್ತಿಯಿಂದಾ ಕುಳಿತು ॥ 64 ॥ ಅರಸಿನಪಿಡಿದು ಹಚ್ಚತಲಿ ಶ್ರೀಗೌರಿಗೆ ಸರಕಾನೇ ತಿರುವೆಮೋರೆಯನು । ಎಡಕ್ಹೋಗಿ ಎರಡು ಕೈಮುಗಿದ್ಹೇಳಿಕೊಂಡರೆ। ಬಲಕೆ ಬಂದಳೆ ಭಾಗ್ಯಲಕ್ಷ್ಮಿ ॥ 65 ॥ ಮಕ್ಕಳು ಮಾಡೋ ಮಹಾತಪ್ಪು ಅಪರಾಧ। ಹೆತ್ತ ಮಾತೆಯರೆಣಿಸುವರೆ । ಸತ್ಯವಂತಳು ಈಕೆ ನಮಗೆಲ್ಲ ಎನುತಲಿ। ಭಕ್ತಿಯಿಂ ಕರವ ಮುಗಿದರು ॥ 66 ॥

ಕಡಲಾಂಬುವಾಸನಮಡದಿಮಹಲಕ್ಷ್ಮೀಗೆ ಒಡೆದ ತೆಂಗಿನಕಾಯಿ ಫಲವು ಮಡದಿಯರಿಗೆ ಅರಸಿನ ಗಂಧ ಕುಂಕುಮ। ಕೊಡುವ ಪುಷ್ಪಗಳುಡಿ ತುಂಬೆ ॥ 67 ॥ ಬಟ್ಟ ಮತ್ತಿನ ಹರಿವಾಣದೊಳ್ ನೈವೇದ್ಯ। ಭಕ್ಷ್ಯಪಾಯಸ ಬಡಿಸಿದರು। ಸಂತುಷ್ಟಿಯಿಂದ ನೋಡುತಲಿ। ಧೇಯಕ್ಕಗೆ ಅಷ್ಟೈಶ್ವರ್ಯವ ನೀಡಿದಳು ॥ 68 ॥ ದುಂಡು ಮುತ್ತಿನ ಹರಿವಾಣದೊಳ್ ನೈವೇದ್ಯ । ಮಂಡಿಗೆ ತುಪ್ಪ ಸಕ್ಕರೆಯು। ಕಂಡು ಸಂತೋಷದಿಂದಾಗ ಧೇಯಕ್ಕನ ಗಂಡಗೆ ರಾಜ್ಯ ನೀಡಿದಳು ॥ 69 ॥ ಹೊಳೆವ ಚಿನ್ನದ ಹರಿವಾಣದೊಳ್ । ಕಡುಬು ಕಟ್ಟಂಬಲಿ ಬಡಿಸಿ ತರಿಸಿದೆಳ್ಳೆಣ್ಣೆ ಹಿಂಡಿಯ ಪಲ್ಯ ತಾಂಬೂಲ। ನಲಿನಲಿದಾಡಿ ನೋಡುತಲಿ ॥ 70 ॥ ಅಕ್ಕತಂಗೇರಾಗ ಜತೆಯಲಾರತಿಯೆತ್ತಿ । ಮುತ್ತೈದೆಯಾರು ಹಾಡುತಲಿ । ಉತ್ತಮಾಂಗನಿಗೆ ಮಂತ್ರಾಕ್ಷತೆಗಳ ಹಾಕಿ । ಎತ್ತಿದಾರತಿ ಇಳಿಸಿದರು ॥ 71 ॥ ಉಂಡಲು ಸಕಲ ಜನರು ಸಹಿತಾಗಿ। ತಕ್ಕೊಂಡು ಕರ್ಪೂರದ ವೀಳ್ಯಗಳ। ಉಂಡು ಸಂತೋಷದಿಂದಾಗ ಕೂತಿರಲು। ಬಂದೆರಗಿದರು ಬಾಲಕರು ॥ 72 ॥ ಅರಸು ತಾನಾಗಿಯೇ ಬಂದನೇನಮ್ಮಯ್ಯನು । ಕರೆಸಿದ ನಿಮ್ಮನೆಂದೆನುತ। ಹರುಷದಿಂದವರ ಮಾತುಗಳ ಕೇಳ್ಯಾನಂದ। ಭರಿತಾದರೆ ಮನೆಯಲ್ಲಿ ॥ 73 ॥ ಗಡಗಡನಾಗ ಬಂದವೆ ತೇಜಿ ರಥಗಳು ನುಡಿದವು ಭೇರಿವಾದ್ಯಗಳು । ಸಡಗರದಿಂದುಡುಗೋರೆ ವೀಳ್ಯವ ಕೊಟ್ಟು ನಡೆದರು ತಮ್ಮ ಮಂದಿರಕೆ ॥ 74 ॥ ಅಕ್ಕತಂಗೇರು ಅಂದಣವೇರಿಕೊಂಡು। ಪಲ್ಲಕ್ಕಿಯೊಳಗೆ ಕುಳಿತುಕೊಂಡು । ಆರ್ತಿಯಿಂದಲಿ ಚಾಮರ ಬೀಸುತ ತಮ್ಮ ಪಟ್ಟಣಕ್ಕೆ ನಡೆತಂದರು ॥ 75 ॥

ಆ ಗೋಪಾಲ ತಂದಾಗ ಕೈಯಲಿ ಕೊಡೆ । ಈ ಕೋಲು ನಿಮ್ಮದೆಂದೆನುತ। ಹಾಕಿತು ಕಾಗೆ ಹಣದ ಬುತ್ತಿ ಗಂಟನು । ಸ್ವೀಕರಿಸಿದನೊಬ್ಬಸುತನು । ಮಡುವಿನೊಳಗೆ ಮುಳುಗಿ ಏಳುತಿರುವುದ ಕಂಡು । ಬುರುಡೆ ಹಣವಕಯ್ಗೊಂಡು ನಡೆವ ಮಾರ್ಗದೊಳಗೆ ಹಾವಿಗೆ । ಕಂಡು ಹಿಡಿದುಕೊಂಡ್ಹಿಗ್ಗಿನಡೆದರು ॥ 77 ॥ ದಡದಡನಾಗೆ ಬಂದವು ಆಗ ಮಳೆಗಳು। ಸೀರೆತೊಯ್ಯಲಾಗದೆಂದೆನಲು । ಹರದೇವರಿಬ್ಬರು ಸೆರಗನೆ ಮರೆಮಾಡಿ ಕರೆತಂದರಾ ತೋಟದಲಿ ॥ 78 ॥ ಒಂದು ಘಳಿಗೆ ಸ್ಥಳವನು ಮಾಡಿಕೊಟ್ಟರೆ । ಬಂದೀತು ಬಹಳ ಪುಣ್ಯಗಳು । ಹಾಗೆಂದ ಮಾತಿಗೆ ತಾನೊಳಗಿನಿಂದ ಬಂದು । ಇಲ್ಲೆಲ್ಲಿ ಸ್ಥಳವು ಹೋಗೆಂದ ॥ 79 ॥ ಮನ್ನಿಸಿ ಕರೆದು ಮುದ್ದಿಸಿ ಮಹಾಲಕ್ಷುಮಿ ದೇವಿಗೆ ಸ್ಥಳಮಾಡಿಕೊಟ್ಟು । ಮತ್ತೆ ನೀವೀಗ ಕೋಪಿಸಲಾರದೀ ಗೌರಿ ಭಕ್ತಿಯಿಂದಲಿ ಕರವ ಮುಗಿದರು ॥ 80 ॥ ಎತ್ತಲಗೌರಿ ಎಲ್ಲಿಯ ದ್ರೋಹ ನಮಗಿನ್ನ ಪತ್ನಿಯ ಕರೆದು ಕೇಳಿದನು । ಸತ್ಯವಂತಳು ಆಕೆ ಸಮರಿಲ್ಲವೆನುತಲಿ । ಭಕ್ತಿಯಿಂದ ಕರವ ಮುಗಿದಳು ॥ 81 ॥

ಹಿಂದಕೆ ಸೋಮೇಶಮ್ಮಾನ ಮನೆಯಲ್ಲಿ । ನಿಂದೆಮಾಡಿದೆ ಗೌರಿಯನ್ನು । ಬಂದೀತು ನಮಗೆ ವನವಾಸವೆಂದೆನುತಲಿ । ಗಂಡಗೆ ತಿಳಿಯಹೇಳಿದಳು ॥ 82 ॥ ಜಾತವಾದರು ಪಾರಿಜಾತವನದಾಗೆ । ಅನಾಥರನ್ನ ಮಾಡಿ ಬಂದೆ । ಪ್ರೀತಿಯಿಂದಲಿ ಸಲಹಿದವರ್ ಯಾರೆಂದು ಆ ತಾಯಿ ಸುತರ ಕೇಳಿದಳು ॥ 83 ॥ ತುಲಸಿಗೆನುತಬಂದ ಸೋಮೇಶಭಟ್ಟನುಗಳಿಸಿಕೊಂಡೊಯ್ದು ನಮ್ಮನ್ನ । ಬೆಳೆಸಿ ಎರಡನೆ ಧಾರೆ ಅರಸು ಪ್ರಧಾನಿಗೆ ಕಳಿಸಿದಾಗ ಸಂಭ್ರಮದಿ ॥ 84 ॥

ಅಕ್ಕರೆಯಿಂದ ಪೇಳಿದಳು ಸೋಮೇಶಮ್ಮ । ಶುಕ್ರವಾರ ಗೌರಿಯನು ಮಕ್ಕಳು ಸೊಸೆಯರು ಇದು ಎಲ್ಲ ಸೋಮೇಶ । ಭಟ್ಟನಪುಣ್ಯವಿದೆಂದು ॥ 85 ॥ ಹಿಂದಾಗಲೊನವಾಸ ಮುಂದ್ಯಾಕೆಂದೆನುತಲಿ । ತಂದುಕೊಟ್ಟರು ತಾಯಿತಂದೇರ । ಉಡುಗೊರೆಯ। ಮುಗಯ್ಯ ಹಿಡಿದ ಮುಪ್ಪಿನ ಅಂದಣವನೆಳರಿಸಿದರು ॥ 86 ॥ ಭೋರೆಂಬೋ ನದಿಯ ದಾಟುತಲಿ ಕಟ್ಟಿಸಿದರು ಊರಬಾಗಿಲಿಗೆ ತೋರಣವ । ಭೇರಿ ನಗಾರಿ ತುತ್ತೂರಿವಾದ್ಯಗಳಿಂದ । ಸಾಲುದೀವಟಿಗೆ ಸಂಭ್ರಮದಿ ॥ 87 ॥ ಹಾಸುತ ನಡುಮುಡಿ ಒಳಕದಾರತಿ । ಬೀಸುತ್ತ ಬಿಳಿಯ ಚಾಮರವ । ಸೋಸಿನಿಂದಲಿಕರೆತಂದರರಮನೆಗೆ । ಸಿಂಹಾಸನದಲೊಪ್ಪಿರವೋಮಹಾಲಕ್ಷ್ಮೀಗೆ ॥ 88 ॥

ಅರಳು ಪೂಗಂಧ ಕುಂಕುಮವಾ ನಾರಿಯರು ಹರಿವಾಣದೊಳು ತಂದಿರಿಸಿ । ಪರಿಪರಿಯಲಿ ಸರ್ವಾಂಗ ಪೂಜೆಯ ಮಾಡಿ । ಫಲಗಳನೊಪ್ಪಿಸಿ ಕಯ್ಯ ಮುಗಿಯೆ ॥ 89 ॥ ಬಿತ್ತಿದ ಬೆಳೆರಾಶಿ ವುಕ್ಕುವ ನವಧಾನ್ಯ । ಉಕ್ಕುವಂದದಿ ಕ್ಷೀರರಸವು । ಲೆಕ್ಕವಿಲ್ಲದೆ ಮಕ್ಕಳಾಗೋರು । ಮನೆತುಂಬ ಮುತ್ತೈದ್ದೆತನವ ನೀಡುವಳು ॥ 90 ॥ ತಾ ಸುರಕಾಮಧೇನು ಎಂದೆನಿಸಿ ಭೀ । ಮೇಶಕೃಷ್ಣನು ಸಹಿತವಾಗಿ । ಲೇಸಾಗಿದ್ದ ಸಂಪತ್ತನ್ನೆಲ್ಲ ಕೊಟ್ಟು । ವಾಸವಾದಳು ಮಹಾಲಕ್ಷ್ಮೀ ॥ 91 ॥

ಮಂಗಳ ಜಯವೆನ್ನಿ ಮಂಗಳ ಶುಭವೆನ್ನಿ । ಮಂಗಳಾಂಗನೆ ಮಹಾಲಕ್ಷುಮಿ ಕಂಗಳು ತೆರೆದು ಕಟಾಕ್ಷದಿ ನೋಡಲು । ಇಂಗೋದು ಸಕಲಪಾಪಗಳು ॥

ಬರಡು ಕರೆಯಲಿ ಬಂಜೆಗೆ ಮಕ್ಕಳಾಗಲಿ । ಕುರುಡಗೆ ಕಂಗಳು ಬರಲಿ ಬರ ಹರಿಯಲಿ ದಾರಿದ್ರ್ಯಗಳಿಂದ । ಶ್ರೀ ಹರಿ ನಮ್ಮ ಹೃದಯದೊಳಿರಲಿ ॥

॥ ಶ್ರೀರಸ್ತು ॥